ಹಾಸನ ಜಿಲ್ಲೆಯ ಶಾಂತಿ ಗ್ರಾಮದಲ್ಲಿ ಪವರ್ ಸಬ್ ಸ್ಟೇಷನ್ ಮಂಜೂರಾತಿ

792 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾಸನ ಜಿಲ್ಲೆಯ ಶಾಂತಿ ಗ್ರಾಮಕ್ಕೆ ಒಂದು ಪವರ್ ಸಬ್ ಸ್ಟೇಷನ್ ಮಂಜೂರಾಗಿರುವುದು ನಿಜವಲ್ಲವೆ?*

ಆ) *ಈ ಸಬ್ ಸ್ಟೇಷನ್ ಅಂದಾಜು ವೆಚ್ಚ ಎಷ್ಟು?*

ಇ) *ಈ ಯೋಜನೆಯನ್ನು ಟರ್ನ್‌ಕೀ ಪ್ರಾಜೆಕ್ಟ್‌ನಲ್ಲಿ ಆದ್ಯತೆಯ ಮೇಲೆ ಮಾಡಲು ಕೆ.ಪಿ.ಟಿ.ಸಿ.ಎಲ್.ಗೆ ಆದೇಶ ಕೊಟ್ಟಿರುವುದು ನಿಜವಲ್ಲವೇ?*

ಈ) *ಈ ಯೋಜನೆಯ ಕಾರ್ಯವನ್ನು ತಕ್ಷಣ ಪ್ರಾರಂಭಿಸಿ, ಪೂರ್ಣಗೊಳಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?*

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹಾಸನ ಜಿಲ್ಲೆಯ ಶಾಂತಿ ಗ್ರಾಮದಲ್ಲಿ ಒಂದು 66:11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಇದಕ್ಕೆ ಬೇಕಾದ ತಾಂತ್ರಿಕ ವರದಿಯನ್ನು ತಯಾರಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ತಾಂತ್ರಿಕ ವರದಿಯನ್ನು ಸಿದ್ಧಪಡಿಸಿದ ನಂತರ ಅದನ್ನು ನಿಗಮದ ತಾಂತ್ರಿಕ ಸಮಿತಿಯ ಮುಂದೆ ಮಂಡಿಸಲಾಗುವುದು. ತಾಂತ್ರಿಕ ಸಮಿತಿಯು ತೆಗೆದುಕೊಳ್ಳುವ ನಿರ್ಧಾರದ ಪ್ರಕಾರ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳು

793 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಸರ್ಕಾರ ಯಾವ ಯಾವ ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳಿಗೆ ಎಷ್ಟು ಎಷ್ಟು ಹಣವನ್ನು ಬಂಡವಾಳ ರೂಪದಲ್ಲಿ ತೊಡಗಿಸಿದೆ?*

ಆ) *ಸರ್ಕಾರಿ ಸ್ವಾಮ್ಯದ ಯಾವ ಯಾವ ಕೈಗಾರಿಕೆಗಳು ಕಳೆದ ಮೂರು ವರ್ಷಗಳಿಂದ ನಷ್ಟದಲ್ಲಿ ನಡೆಯುತ್ತಿದೆ?*

ಇ) *ಈ ರೀತಿ ನಷ್ಟದಲ್ಲಿರುವ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಬಗೆಗೆ ಸರ್ಕಾರದ ನಿಲುವೇನು?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) 78 ಉದ್ದಿಮೆಗಳಲ್ಲಿ ಸರ್ಕಾರವು ಹೂಡಿರುವ ಬಂಡವಾಳವು ಸಾಲವನ್ನು ಹೊರತು ಪಡಿಸಿದಂತೆ) 3347.22 ಕೋಟಿ ರೂ.ಗಳು ವಿವರಗಳನ್ನು ಅನುಬಂಧ -1ರಲ್ಲಿ ನೀಡಲಾಗಿದೆ.